ಹಸಿರು ಚೀಟಿಯ ಬದಲು ಹೊಸ ಪಡಿತರ ಚೀಟಿಯನ್ನು ವಿತರಿಸುವುದು

472. ಶ್ರೀ ಟಿ.ಎ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಸಿರು ಕಾರ್ಡಿಗೆ ಬದಲಾಗಿ ಬೇರೆ ಪಡಿತರ ಚೀಟಿಗಳನ್ನು ವಿತರಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಇನ್ನೆಷ್ಟು ದಿನಗಳಲ್ಲಿ ಹೊಸ ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು.

ಇ) ಇಲ್ಲದಿದ್ದಲ್ಲಿ ಈಗ ಹಸಿರು ಕಾರ್ಡು ವಿತರಣೆಯಲ್ಲಿ ಈಗಿರುವ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) ಪ್ರಸ್ತುತ ಅವಧಿಯಲ್ಲಿರುವ ಖೂಟ್ಟಿ ಹಸಿರು ಕಾರ್ಡುಗಳನ್ನು ಪತ್ತೆಹಚ್ಚಿ ರದ್ದುಮಾಡಿ ಅಷ್ಟಕ್ಕೆ ಮೀರದಂತೆ ಹೊಸ ಅರ್ಹ ಕುಟುಂಬದವರಿಗೆ ಹಸಿರು ಕಾರ್ಡು ನೀಡಲು ಸರ್ಕಾರದ ನಿರ್ದೇಶನವಿದೆ.

ಸರ್ಕಾರದ ದಿನಾಂಕ 8–11–1990 ಆದೇಶ ಸಂ. ಎಫ್‌ಟಿಡಿ 57 ಡಿಆರ್‌ಎ 90ರಲ್ಲಿ ಗ್ರಾಮಾಂತರ ಪ್ರದೇಶದ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಜಿಲ್ಲಾ ಪರಿಷತ್‌ನಿಂದ ವಾಪಾಸ್ಸು ಪಡೆದು ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುತ್ತದೆ. ಇದರ ಅನ್ವಯ ಹೆಚ್ಚುವರಿಯಾಗಿ ಹಸಿರು ಕಾರ್ಡು ಫಲಾನುಭವಿಗಳನ್ನು ತಹಶೀಲ್ದಾರರು ಗುರುತಿಸಿ, ಆ ಪಟ್ಟಿಯನ್ನು ಗ್ರಾಮ ಸಭಾ ಮತ್ತು ಮಂಡಲ ಪಂಚಾಯಿತ್ ಮತ್ತು ಜಿಲ್ಲಾಪರಿಷತ್ ಮುಂದೆ ಅನುಮೋದಿಸಿ ನಂತರ ಕ್ರೋಢೀಕೃತ ವರದಿಯನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವ ಯೋಜನೆಯನ್ನು ಅಳವಡಿಸಲಾಗಿದೆ.

ಹಸಿರು ಪಡಿತರ ಚೀಟಿಯ ವಿತರಣೆ ಬಗ್ಗೆ

486. ಶ್ರೀ ನಾಗರಾಜು (ಮಾಲೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಸಿರು ಪಡಿತರ ಚೀಟಿ ವಿತರಿಸುವಲ್ಲಿ ತಾರತಮ್ಯವಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಅಂತರ ರಾಜ್ಯ ಸಾರಿಗೆ ಸಂಪರ್ಕದ ಬಗ್ಗೆ

482. ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೀದರ್ ಜಿಲ್ಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ಕಚೇರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

2) ಬೀದರ್‌ನಿಂದ–ಔರಂಗಾಬಾದ್–ನಿಜಾಮಾಬಾದ್–ಮುಂಬೈ–ಶಿರಡಿ ಗೋವಾಗಳಿಗೆ ಅಂತರ ರಾಜ್ಯ ಸಾರಿಗೆ ವ್ಯವಸ್ಥೆಯನ್ನು ಮಾಡುವಂತೆ ಸರ್ಕಾರಕ್ಕೆ ಮನವಿಗಳೇನಾದರೂ ಬಂದಿದೆಯೇ?

3) ಹಾಗಿದ್ದಲ್ಲಿ, ಆ ಮನವಿಗಳ ಬಗ್ಗೆ ಕೈಗೊಂಡ ಕ್ರಮಗಳೇನು?

4) ಬಸವಕಲ್ಯಾಣದಿಂದ–ಬೆಂಗಳೂರು–ಲಾತೂರು–ಕೂಡಲಸಂಗಮ–ಉಳವಿ–ಪೂನಾ–ಹೈದರಾಬಾದ್–ಜರಸಂಗಮ–ಉಮರಗ–ನೀಲಂಗಗಳಿಗೆ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳ ಸೌಲಭ್ಯವನ್ನು ಕಲ್ಪಿಸುವಂತೆ ಅನೇಕ ಮನವಿಗಳನ್ನು ನೀಡಿದ್ದರೂ ಇದುವರೆವಿಗೂ ಬಸ್ಸು ಸೌಲಭ್ಯವನ್ನು ಕಲ್ಪಿಸದಿರಲು ಕಾರಣವೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):–

1) ಹುಮ್ನಾಬಾದ್ ಕೇಂದ್ರ ಸ್ಥಾನವಾಗುವಂತೆ ಬೀದರ್ ವಿಭಾಗವನ್ನು ರಚಿಸಲು ತಾತ್ವಿಕವಾಗಿ ನಿರ್ಧರಿಸಲಾಗಿದೆ. ಆರ್ಥಿಕ ಸಹಾಯ, ಯಂತ್ರೋಪಕರಣಗಳನ್ನು ಹೊಂದಿಸುವುದು ಸಿಬ್ಬಂದಿಯ ಆಯ್ಕೆ ಇತ್ಯಾದಿಗಳನ್ನೊಳಗೊಂಡಂತೆ ವಿಭಾಗ ರಚನೆಗೆ ಪೂರ್ವಭಾವಿ ಸಿದ್ಧತೆಗಳ ಬಗೆಗೆ ನಿರ್ಧಾರ ಕೈಗೊಳ್ಳಲಾಗುತ್ತಿದೆ. ಈ ಸಿದ್ಧತೆಗಳಾದೊಡನೆಯೇ ಬೀದರ್ ವಿಭಾಗವನ್ನು ರಚಿಸಲಾಗುವುದು.

2) ಬಂದಿದೆ.

3) ಅಂತರ ರಾಜ್ಯ ಸಾರಿಗೆಗಳ ಕಾರ್ಯಾಚರಣೆಯು ಅಂತರ ರಾಜ್ಯ ಒಪ್ಪಂದಗಳಿಗೆ ಒಳಪಡುವುದರಿಂದ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಗೋವಾ ರಾಜ್ಯಗಳ ಸರ್ಕಾರಗಳೊಡನೆ ಮುಂದೆ ಬದಲಾಗುವ ಅಂತರ ರಾಜ್ಯ ಒಪ್ಪಂದದ ಸಮಯದಲ್ಲಿ ಈ ಪ್ರಸ್ತಾವನೆಗಳನ್ನು ಚರ್ಚಿಸಿ ಅಖೈರುಗೊಳಿಸಲಾಗುವುದು.

4) 1) 1989ನೇ ಮಾರ್ಚ್ ತಿಂಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬಸವಕಲ್ಯಾಣದಿಂದ ಉಳಿವಿಗೆ ಧಾರವಾಡ, ಹಳಿಯಾಳ ಮತ್ತು ದಾಂಡೇಲಿ ಮಾರ್ಗವಾಗಿ ಒಂದು ಸಾರಿಗೆಯನ್ನು ಪ್ರಾರಂಭಿಸಿತು. ಆದರೆ ಇದು ಸಾಕಷ್ಟು ಜನಾಧರಣೆ ಪಡೆಯಲು ವಿಫಲವಾಗಿದ್ದರಿಂದ 1989ನೇ ಜುಲೈ ತಿಂಗಳಿನಿಂದ ಧಾರವಾಡಕ್ಕೆ ಮೊಟಕುಗೊಳಿಸಲಾಗಿದೆ.

2) ಬಸವಕಲ್ಯಾಣದಿಂದ ಕೂಡಲಸಂಗಮಕ್ಕೆ ಅಗತ್ಯ ನೇರ ಪ್ರಯಾಣಿಕರ ಕೊರತೆಯಿರುವುದರಿಂದ ಹಾಗೂ ಅಂತಹ ಪ್ರಯಾಣಿಕರು ಬಾಗಲಕೋಟೆ ಅಥವಾ ಬಸವನಬಾಗೇವಾಡಿಗೆ ಬಸವಕಲ್ಯಾಣದಿಂದ ಒದಗಿಸಲಾಗಿರುವ ಸಾರಿಗೆಗಳ ಮೂಲಕ ಪ್ರಯಾಣ ಮಾಡಿ ಕೂಡಲಸಂಗಮ ಸಾರಿಗೆಗಳ ಸಂಪರ್ಕವನ್ನು ಪಡೆಯಬಹುದು. ಆದ್ದರಿಂದ ಈ ಮಾರ್ಗದಲ್ಲಿ ಸದ್ಯಕ್ಕೆ ನೇರಸಾರಿಗೆ ಪ್ರಾರಂಭಿಸುವ ಅಗತ್ಯ ಕಾಣದು.

3) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬೀದರ್ ಮತ್ತು ಗುಲ್ಬರ್ಗಾದಿಂದ ಬೆಂಗಳೂರಿಗೆ ಸಾರಿಗೆ ಸೌಕರ್ಯ ಒದಗಿಸಿದೆ. ಬಸವಕಲ್ಯಾಣದಿಂದ ಬೆಂಗಳೂರಿಗೆ ಹೋಗಬಯಸುವ ಪ್ರಯಾಣಿಕರು ಹುಮ್ನಾಬಾದ್ ಅಥವಾ ಗುಲ್ಬರ್ಗಾದಲ್ಲಿ ಈ ಸಾರಿಗೆಗಳ ಸಂಪರ್ಕವನ್ನು ಸರಾಗವಾಗಿ ಪಡೆಯಬಹುದು.

4) ಬಸವಕಲ್ಯಾಣದಿಂದ ವಿವಿಧ ಸ್ಥಳಗಳಿಗೆ ಅಂತರರಾಜ್ಯ ಸಾರಿಗೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳನ್ನು ಮುಂದೆ ಜರುಗುವ ಅಂತರ ರಾಜ್ಯ ಸಭೆಗಳಲ್ಲಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ಸರ್ಕಾರಗಳೊಡನೆ ಚರ್ಚಿಸಿ ಅಖೈರುಗೊಳಿಸಲಾಗುವುದು.

ಬ್ರಹ್ಮಾವರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಾಕಷ್ಟು ಸೌಲಭ್ಯವನ್ನು ಒದಗಿಸುವುದು.

(475) ಶ್ರೀ ಪಿ. ಬಸವರಾಜು (ಬ್ರಹ್ಮಾವರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ರಹ್ಮಾವರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಲವಾರು ಸೌಲಭ್ಯಗಳ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?